**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ.**

**ಃ <u>ಉಪಸ್ಥಿತರು</u> ಃ**

**ಶ್ರೀ ರವೀಂದ್ರಕುಮಾರ ಬಿ. ಕಟ್ಟಿಮನಿ**

ಬಿ.ಎ., ಎಲ್‌ಎಲ್.ಬಿ (ಸ್ಪೆಷಲ್)

2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.

**ದಿನಾಂಕಃ 10 ನೇ ಜುಲೈ 2015**

**<u>ಅಸಲು ದಾಸಾ ನಂ.16/2014</u>**

ವಾದಿ : ಎಸ್.ಜಿ. ನಿಂಗಪ್ಪ ಉಃ ನಿಂಗಪ್ಪನಾಯ್ಕ

-ಃವಿರುದ್ಧಃ-

ಪ್ರತಿವಾದಿಯರು : ನಂಜನಾಯ್ಕ

**<u>ಮಧ್ಯಕಾಲೀನ ಅರ್ಜಿ ನಂ.5</u>**

ಅರ್ಜಿದಾರರು : ಎಸ್.ಜಿ. ನಿಂಗಪ್ಪ ಉಃ ನಿಂಗಪ್ಪನಾಯ್ಕ
(ವಾದಿ)

-ಃವಿರುದ್ಧಃ-

ಎದುರುದಾರರು : ನಂಜನಾಯ್ಕ
(ಪ್ರತಿವಾದಿಯರು)

## -:: ಮಧ್ಯಕಾಲೀನ ಅರ್ಜಿ ನಂ.5 ರ ಮೇಲೆ ಆದೇಶ ::-

ಅರ್ಜಿದಾರ/ವಾದಿಯು ಮಧ್ಯಕಾಲೀನ ಅರ್ಜಿ ನಂ.5 ನ್ನು ಕ್ರಮಾದೇಶ 22 ನಿಯಮ 4 ದಿವಾಣಿ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಸಲ್ಲಿಸಿ, ಈ ದಾವೆಯಲ್ಲಿ ಪ್ರತಿವಾದಿಯು ಮರಣ ಹೊಂದಿದ್ದು, ಅವರ ಕಾನೂನುಬದ್ಧ ವಾರಸುದಾರರನ್ನು ಕಡತದ ಮೇಲೆ ತರಲು ಅನುಮತಿ ನೀಡಬೇಕೆಂದು ಕೋರಿಕೊಂಡಿದ್ದಾರೆ.

2. ಅರ್ಜಿದಾರ/ವಾದಿಯು ಲಗತ್ ಪ್ರಮಾಣ ಪತ್ರದಲ್ಲಿ ತಿಳಿಸಿರುವುದೇನೆಂದರೆ, ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಹಕ್ಕುದಾರಿಕೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ಡಿಕ್ರಿ ಪರಿಹಾರ ಕೋರಿ ತಂದಿರುತ್ತಾರೆ. ದಾವೆಯನ್ನು ದಾಖಲಿಸಿದ ತರುವಾಯದಲ್ಲಿ ಸದರಿ ಪ್ರತಿವಾದಿಯಾದ ನಂಜನಾಯ್ಕನು ಮರಣ ಹೊಂದಿರುತ್ತಾನೆ. ಈತನು ಅರ್ಜಿಯಲ್ಲಿ ತೋರಿಸಿದಂತೆ ವಾರಸುದಾರರು ಇರುತ್ತಾರೆ. ಈ ದಾವೆಯಲ್ಲಿ ಅವರು ಅವಶ್ಯಕ ಪಕ್ಷಗಾರರಾಗಿರುತ್ತಾರೆ. ಸದರಿ ದಾವಾವನ್ನು ಹಕ್ಕುದಾರಿಕೆ ಕೋರಿ ದಾಖಲಿಸುವ ಹಿನ್ನಲೆಯಲ್ಲಿ ನಂಜನಾಯ್ಕನ ಮರಣಾ ನಂತರ ಆತನ ಉತ್ತರಾಧಿಕಾರಿಗಳು ಮತ್ತು ಕಾನೂನುಬದ್ಧ ವಾರಸುದಾರರಾದ ಅರ್ಜಿಯಲ್ಲಿ ತೋರಿಸಿದ ವ್ಯಕ್ತಿಗ್ಗಳನ್ನು ಕಡತದ ಮೇಲೆ ಸ್ವೀಕರಿಸಲು ಕೋರಿ ಅರ್ಜಿಯನ್ನು ತಂದಿರುತ್ತಾರೆ. ಅರ್ಜಿದಾರ/ವಾದಿಯು ನೀಡಿರುವ ಕಾರಣಗಳು ಸಕಾರಣಗಳಾಗಿದ್ದು, ತಾನು ಸಲ್ಲಿಸಿದ ಮಧ್ಯಕಾಲೀನ ಅರ್ಜಿಯನ್ನು ಪುರಸ್ಕರಿಸುವಂತೆ ಕೋರಿಕೊಂಡಿದ್ದಾರೆ.

3. ಎದುರುದಾರ/ಪ್ರತಿವಾದಿಯ ಕಾನೂನುಬದ್ಧ ವಾರಸುದಾರರಾದ ಡಿ.1(ಎ) ರಿಂದ ಡಿ.1(ಇ) ರ ಪರ ಲಿಖಿತ ತಕರಾರನ್ನು ಸಲ್ಲಿಸಿ, ಲಿಖಿತ ತಕರಾರಿನಲ್ಲಿ ವಾದಿಯರು ತಂದಿರುವ ಅರ್ಜಿಯು ವಸ್ತುಸ್ಥಿತಿ ವಿದ್ಯಾಮಾನಗಳಿಗೆ ವಿರೋಧವಾಗಿದ್ದು, ಅರ್ಜಿಯು

ವಜಾಗೊಳ್ಳತಕ್ಕದ್ದಾಗಿರುತ್ತದೆ. ಪ್ರತಿವಾದಿಯು ದಿನಾಂಕ 28-05-2014 ರಂದು ಪೌತಿಯಾಗಿದ್ದು, ವಾದಿಯರು ಅರ್ಜಿಯನ್ನು ಸಕಾಲದಲ್ಲಿ ಸಲ್ಲಿಸದೇ ಕಾಲವಿಳಂಬದೊಂದಿಗೆ ಕೂಡಿದ್ದಾಗಿದ್ದು, ಈ ಒಂದು ಕಾರಣದಿಂದಲೇ ಅರ್ಜಿಯು ವಜಾ ಆಗತಕ್ಕದ್ದಾಗಿರುತ್ತದೆ. ವಾದಿಯರಿಗೆ ದಾವಾ ಅನುಸೂಚಿ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಸ್ವಾಧೀನ ಇಲ್ಲದಿದ್ದಾಗ್ಯೂ ಮೃತ ಪ್ರತಿವಾದಿಯ ವಿರುದ್ಧ ದಾವಾ ತಂದು ಮೃತ ಪ್ರತಿವಾದಿಗೆ ತೊಂದರೆ ನೀಡುತ್ತಿದ್ದು, ಪ್ರತಿವಾದಿ ಗತಿಸಿದ ನಂತರ ಅವರ ವಾರಸುದಾರರುಗಳಿಗೆ ತೊಂದರೆ ನೀಡುವ ಸಲುವಾಗಿ ಅರ್ಜಿಯನ್ನು ತಂದಿರುತ್ತಾರೆ. ಕಾರಣ ವಾದಿಯು ತಂದಿರುವ ಮಧ್ಯಕಾಲೀನ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

4. ಅರ್ಜಿದಾರ/ವಾದಿಯ ಪರ ವಕೀಲರ ಮತ್ತು ಎದುರುದಾರ/ಪ್ರತಿವಾದಿಯ ಪರ ವಕೀಲರ ವಾದವನ್ನು ಆಲಿಸಿದ್ದೇನೆ ಮತ್ತು ಸಮಗ್ರ ದಾಖಲಾತಿಗಳನ್ನು ಪರಿಶೀಲಿಸಿದ್ದೇನೆ.

5. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉಂಟಾಗಿರುತ್ತವೆ.

1. ಅರ್ಜಿದಾರ/ವಾದಿಯು ಸಲ್ಲಿಸಿದ ಮಧ್ಯಕಾಲೀನ ಅರ್ಜಿ ನಂ.5 ನ್ನು ಪುರಸ್ಕರಿಸಲು ಸಕಾರಣಗಳಿವೆಯೇ ಎಂಬುದನ್ನು ರುಜುವಾತುಪಡಿಸುತ್ತಾರೆಯೇ?
2. ಯಾವ ಆದೇಶ ?

6. ಈ ಮೇಲಿನ ಅಂಶಗಳಿಗೆ ನನ್ನ ನಿರ್ಣಯ ಈ ಕೆಳಗಿನಂತೆ ಇರುತ್ತವೆ.

ಅಂಶ-1 : ಸಕಾರಾತ್ಮಕವಾಗಿ
ಅಂಶ-2 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

## -:ಕಾರಣಗಳು:-

7. **ಅಂಶ ನಂ.1** :- ವಾದಿಯು ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ತಂದಿರುತ್ತಾರೆ. ವಾದಿಯ ನಿರ್ಧಿಷ್ಟ ವಾದವೇನೆಂದರೆ, ಪ್ರತಿವಾದಿಯು ದಾವಾ ಸಲ್ಲಿಸಿದ ನಂತರ ಮರಣ ಹೊಂದಿದ್ದು, ಮಧ್ಯಕಾಲೀನ ಅರ್ಜಿಯಲ್ಲಿ ತೋರಿಸಿದವರು ಪ್ರತಿವಾದಿಯ ಕಾನೂನುಬದ್ಧ ವಾರಸುದಾರರಾಗಿರುತ್ತಾರೆ ಮತ್ತು ಅವರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿರುತ್ತಾರೆಂದು ಕೋರಿಕೊಂಡಿದ್ದಾರೆ. ಪ್ರತಿವಾದಿಯ ವಾರಸುದಾರರು ಹಾಜರಾಗಿ ತಕರಾರನ್ನು ಸಲ್ಲಿಸಿ, ಸದರಿ ಅರ್ಜಿಯನ್ನು ಸಲ್ಲಿಸಲು ವಿಳಂಬವಾಗಿರುತ್ತದೆ. ಕಾರಣ ಮಧ್ಯಕಾಲೀನ ಅರ್ಜಿ 1 ನ್ನು ತಿರಸ್ಕರಿಸುವಂತೆ ಕೋರಿಕೊಂಡಿದ್ದಾರೆ.

8. ಪ್ರತಿವಾದಿಯ ಕಾನೂನುಬದ್ಧ ವಾರಸುದಾರರು ತಮ್ಮ ತಕರಾರಿನಲ್ಲಿ ತಿಳಿಸಿರುವುದೇನೆಂದರೆ, ಪ್ರತಿವಾದಿಯು ದಿನಾಂಕ 28-05-2014 ರಂದು ಪೌತಿಯಾಗಿರುತ್ತಾರೆ ಎಂದು ಒಪ್ಪಿಕೊಂಡಿದ್ದಾರೆ. ವಾದಿಯು ಈ ಅರ್ಜಿಯನ್ನು ದಿನಾಂಕ 10-09-2014 ರಂದು ಸಲ್ಲಿಸಿರುತ್ತಾರೆ. ವಾದಿಯು ಸಲ್ಲಿಸಿದ ಅರ್ಜಿಯು ಸಕಾಲದಲ್ಲಿದ್ದು ಯಾವುದೇ ಕಾಲ ವಿಳಂಬದಿಂದ ಕೂಡಿರುವುದಿಲ್ಲ. ಅಲ್ಲದೇ, ಅರ್ಜಿಯಲ್ಲಿ ತೋರಿಸಿರುವವರು ಪ್ರತಿವಾದಿಯ ಕಾನೂನುಬದ್ಧ ವಾರಸುದಾರರಾಗಿದ್ದು, ಅವರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿದ್ದಾರೆಂದು ಕಂಡುಬರುತ್ತದೆ. ದಾವೆಯನ್ನು ಇತ್ಯರ್ಥಪಡಿಸಲು ಮತ್ತು ಮುಂದಾಗುವ ದಾವೆಯ ದ್ವಿಗುಣವನ್ನು ತಪ್ಪಿಸಲು ಮತ್ತು ಅರ್ಜಿಯಲ್ಲಿ ತೋರಿಸಿದ ಅಂಶಗಳು ಸಕಾರಣಗಳಾಗಿರುವುದರಿಂದ ಅಂಶ ನಂ.**1** ನ್ನು **ಸಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

9. **ಅಂಶ 2** ಃ- ಈ ಮೇಲಿನ ಚರ್ಚೆ ಮತ್ತು ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಿದ್ದೇನೆ.

**-ಃ ಆದೇಶ ಃ-**

***ಅರ್ಜಿದಾರ/ವಾದಿಯು ಸಲ್ಲಿಸಿದ ಮಧ್ಯಕಾಲೀನ ಅರ್ಜಿ 5 ಕ್ರಮಾದೇಶ 22 ನಿಯಮ 4 ದಿವಾಣಿ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿನ ಅರ್ಜಿಯನ್ನು ರೂ.100/- ಗಳ ಖರ್ಚಿನೊಂದಿಗೆ ಪುರಸ್ಕರಿಸಲಾಯಿತು ಮತ್ತು ಪ್ರತಿವಾದಿಯ ವಾರಸುದಾರರಾದ ಡಿ.1(ಎ) ಯಿಂದ ಡಿ.1(ಇ) ರವರನ್ನು ವಾರಸುದಾರರನ್ನಾಗಿ ಸೇರ್ಪಡೆ ಮಾಡಲು ಅನುಮತಿ ನೀಡಲಾಯಿತು.***

(ಈ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನ ಕೊಟ್ಟು, ಆಕೆಯು ಗಣಕಯಂತದ್ರ ಮೇಲೆ ಬೆರಳಚ್ಚು ಮಾಡಿದ ನಂತರ ತಪ್ಪಿದ್ದಲ್ಲಿ ತಿದ್ದಿ, ಇಂದು ದಿನಾಂಕ **10ನೇ ಜುಲೈ 2015** ರಂದು ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

***(ರವೀಂದ್ರಕುಮಾರ ಬಿ. ಕಟ್ಟಿಮನಿ)***
2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.